ವಿಷಯ : ಭದ್ರಾ ಮೇಲ್ದಂಡೆ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 414 (72)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1988-89ರ ಆಯವ್ಯಯದಲ್ಲಿ ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಎಕರೆಗೆ ನೀರಾವರಿ ಮಾಡಲು ಉದ್ದೇಶಿಸಲಾಗಿತ್ತು. ಹಾಗೂ ಅದರ ಅಂದಾಜು ವೆಚ್ಚ ಎಷ್ಟು?

ಆ) ಈ ಯೋಜನೆಯ ಅಂಗ ಅಥವಾ ಭಾಗಗಳೇನು?

ಇ) ಈ ಯೋಜನೆಯಿಂದ ಮುಳುಗಡೆಯಾಗಬೇಕಿದ್ದ ಭೂಮಿಯ ಕ್ಷೇತ್ರ ಎಷ್ಟು?

ಈ) ಭದ್ರಾ ಮೇಲ್ದಂಡೆ ಯೋಜನೆಯನ್ನು 1994-95ರ ಆಯವ್ಯಯದಲ್ಲಿ ಸೇರಿಸಲಾಗಿದೆಯೇ, ಹಾಗಿದ್ದಲ್ಲಿ ಈ ಯೋಜನೆಯ ಈಗಿನ ಅಂದಾಜು ಮೊತ್ತವೆಷ್ಟು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಭದ್ರಾ ಮೇಲ್ದಂಡೆ ಯೋಜನೆಯು ಇನ್ನೂ ಅನ್ವೇಷಣೆಯಲ್ಲಿದೆ. ಈ ಯೋಜನೆಯ ರೂಪರೇಖೆಗಳನ್ನು ನಿರ್ಧರಿಸಿ ನಂತರ ಅಂದಾಜನ್ನು ತಯಾರಿಸಬೇಕಾಗಿದೆ. ಈ ಯೋಜನೆಯ ವರದಿಯನ್ನು ತಯಾರಿಸಿ ನಂತರವೇ ತಾಲ್ಲೂಕುವಾರು ನೀರಾವರಿ ವಿವರಗಳನ್ನು ತಿಳಿಯಬಹುದಾಗಿದೆ. 1988-89ನೇ ಸಾಲಿನ ಆಯವ್ಯಯದಲ್ಲಿ ಈ ಯೋಜನೆಗೆ 25.00 ಲಕ್ಷ ರೂ.ಗಳ ಅನುದಾನ ನಿಗಧಿಗೊಳಿಸಲಾಗಿತ್ತು. 1994-95ನೇ ಸಾಲಿನ ಆಯವ್ಯಯದಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ಅನುದಾನವನ್ನು ನೀಡಿರುವುದಿಲ್ಲ.

ಅಧ್ಯಕ್ಷರು : ಮಂಡಿಸಲಾಯಿತು. ಇಲ್ಲಿಗೆ ಪ್ರಶ್ನೋತ್ತರ ಕಾಲ ಮುಗಿಯುತ್ತದೆ.